"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಕರ್ನಾಟಕ ವಿಧಾನ ಪರಿಷತ್ತು

7ನೇ ಫೆಬ್ರವರಿ 2019
ಗುರುವಾರ

**ವಿಷಯಾನುಕ್ರಮಣಿಕೆ**


1. ಬಹುಮತವಿಲ್ಲದ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆಪಾದಿಸಿ ವಿರೋಧ ಪಕ್ಷದ ಸದಸ್ಯರಿಂದ ಧರಣಿ
2. ಸಭೆಯ ಮುಂದಿಡಲಾದ ಕಾಗದ ಪತ್ರಗಳು
3. ಕಾರ್ಯದರ್ಶಿಯವರ ವರದಿ
4. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ
5. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ


*******

(07)/07.02.209/10.40/ಎಸ್‌ಕೆ-ಎಕೆ

## ಕರ್ನಾಟಕ ವಿಧಾನ ಪರಿಷತ್ತು

**ಗುರುವಾರ, 7ನೇ ಫೆಬ್ರವರಿ, 2019**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ: 10 ಗಂಟೆ 46 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು**

~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1. <u>ಬಹುಮತವಿಲ್ಲದ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆಪಾದಿಸಿ ವಿರೋಧ ಪಕ್ಷದ ಸದಸ್ಯರಿಂದ ಧರಣಿ</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-**ಮಾನ್ಯ ಸಭಾಪತಿಯವರೇ,...

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅಜೆಂಡಾ ಪ್ರಕಾರ ಪ್ರಶ್ನೋತ್ತರ ವೇಳೆ ನಡೆಯಲಿ.

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಡಿ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರು ಒಟ್ಟಿಗೆ ನಿಂತು ಮಾತನಾಡುತ್ತಿದ್ದರು.)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಏನು ಹೇಳುತ್ತಿದ್ದಾರೆ? ಸರ್ಕಾರಕ್ಕೆ ಬಹುಮತ ಇಲ್ಲವೆಂದು ಅವರಿಗೆ ಅರ್ಥವಾಗಿದೆ. ಮತ್ತೆ ಏಕೆ ಎದ್ದು ನಿಂತುಕೊಂಡು ಮಾತನಾಡುತ್ತಿದ್ದಾರೆ? ಈಗ ಸರ್ಕಾರ ಬಹುಮತವನ್ನು ಕಳೆದುಕೊಂಡಿದೆ ಎಂಬ ಸುದ್ಧಿಯು ವ್ಯಾಪಕವಾಗಿದೆ.

**(ಗೊಂದಲ)**

**ಡಾ. ಜಿ. ಪರಮೇಶ್ವರ್(ಉಪ ಮುಖ್ಯಮಂತ್ರಿ):-** ಅವರೇನು ಊಹೆ ಮಾಡುತ್ತಿದ್ದಾರೆಯೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿನ್ನೆ ಕೆಳಮನೆಯಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಆಗಿರುವಂತಹ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಂಡಿದ್ದೀರಿ. ದಯವಿಟ್ಟು, ಇದನ್ನು ಗಮನಿಸಬೇಕು.

**(ಗೊಂದಲ)**

**ಡಾ. ಜಿ.ಪರಮೇಶ್ವರ್:–** ಮಾನ್ಯ ವಿರೋಧ ಪಕ್ಷದ ಸದಸ್ಯರು ಏನು ಊಹೆ ಮಾಡುತ್ತಿದ್ದಾರೆಯೋ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಸರ್ಕಾರಕ್ಕೆ ಕಪ್ಪು ಚುಕ್ಕೆ ... ನಾಚಿಕೆಯಾಗಬೇಕು.

**(ಗೊಂದಲ)**

**ಡಾ. ಜಿ. ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಊಹೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ, ಅದನ್ನು ನಡೆಸುವುದಕ್ಕೆ ಬಿಡಿ. ಬರಗಾಲದಿಂದಾಗಿ ಜನ–ಜಾನುವಾರುಗಳು ಸಾಯುತ್ತಿದ್ದು ರಾಜ್ಯದ ಜನತೆಗೆ ತೊಂದರೆಯಾಗಿದೆ. ಅದರ ಬಗ್ಗೆ ಚರ್ಚೆಯಾಗಲಿ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು "10% ಸರ್ಕಾರ ಪುಟ್ಟರಂಗ ಶೆಟ್ಟಿ ಮತ್ತೆ ...?", "ವಕ್ಫ್ ಭೂ ಕಬಳಿಕೆ ಸರ್ಕಾರ", "ಮರಳು ಮಾಫಿಯಾ, ಅಧಿಕಾರಿಗಳಿಗೆ ರಕ್ಷಣೆ ಇಲ್ಲ" ಮತ್ತು ಇನ್ನಿತರ ಫಲಕಗಳನ್ನು ಪ್ರದರ್ಶಿಸುತ್ತಾ ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು.)**

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರುಗಳು ತಮ್ಮ ಸ್ಥಾನದಲ್ಲಿ ನಿಂತುಕೊಂಡು, "ಭಾರತೀಯ ಜನತಾ ಪಕ್ಷಕ್ಕೆ ಧಿಕ್ಕಾರ, ಧಿಕ್ಕಾರ" ಎಂಬ ಘೋಷಣೆಯನ್ನು ಕೂಗುತ್ತಿದ್ದರು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಅಜೆಂಡಾ ಪ್ರಕಾರ ಸದನವನ್ನು ನಡೆಸಿ.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ 12.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(8) 07–02–2019/12–20/ಕೆಹೆಚ್–ವಿಕೆ**

**(ಬೆಳಿಗ್ಗೆ 10 ಗಂಟೆ 49 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 12 ಗಂಟೆ 26 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಭಾರತೀಯ ಜನತಾ ಪಕ್ಷದ ಎಲ್ಲಾ ಸದಸ್ಯರುಗಳು ಸದನದ ಬಾವಿಗೆ ಬಂದು " ಕೊಡಿ ಕೊಡಿ ರಾಜೀನಾಮೆ ಕೊಡಿ" ಸರ್ಕಾರಕ್ಕೆ ಧಿಕ್ಕಾರ, ಧಿಕ್ಕಾರ", " ಮುಖ್ಯಮಂತ್ರಿಗಳ ರಾಜೀನಾಮೆ ಬೇಕೇ ಬೇಕು", ಭ್ರಷ್ಟಾ ಸಮ್ಮಿಶ್ರ ಸರ್ಕಾರಕ್ಕೆ ಧಿಕ್ಕಾರ, ಧಿಕ್ಕಾರ" ಎಂದು ಘೋಷಣೆಗಳನ್ನು ಕೂಗುತ್ತಿದ್ದರು. ಹಾಗೂ "10% ಸರ್ಕಾರ ಪುಟ್ಟರಂಗ ಶೆಟ್ಟಿ ಮತ್ತೆ. . .?" "ವಕ್ಫ್ ಭೂ ಕಬಳಿಕೆ ಸರ್ಕಾರ", "ಮರಳು ಮಾಫಿಯಾ", "ಅಧಿಕಾರಿಗಳಿಗೆ ರಕ್ಷಣೆ ಇಲ್ಲ" ಎಂಬ ಫಲಕಗಳನ್ನು ಪ್ರದರ್ಶಿಸುತ್ತಾ ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ . . .

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ತಮ್ಮ ಸ್ಥಾನದಲ್ಲಿ ನಿಂತುಕೊಂಡು " 50 ಕೋಟಿ ಮತ್ತು ಮಂತ್ರಿಗಿರಿ ನೀಡುವ ಬಿಜೆಪಿ ಗೆ ದುಡ್ಡು ಎಲ್ಲಿಂದ ಬಂತು" ಎಂಬ ಫಲಕಗಳನ್ನು ಪ್ರದರ್ಶಿಸಿದರು ಹಾಗೂ ಬಿಜೆಪಿ ಗೆ ಧಿಕ್ಕಾರ, ಧಿಕ್ಕಾರ ಎಂದು ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ . . .

**(ಗೊಂದಲ)**

**ಡಾ|| ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಸಭೆಯ ಮುಂದಿಡಲಾದ ಕಾಗದ ಪತ್ರಗಳನ್ನು ಮಂಡಿಸುವುದು.

**(9) 07/02/2019/12:30/ಎಸ್‌ಪಿಆರ್/ವಿಕೆ**

**2. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>**

**(ಪಟ್ಟಿಯನ್ನು ಲಗತ್ತಿಸಿದೆ)**

**3. <u>ಕಾರ್ಯದರ್ಶಿಯವರ ವರದಿ</u>**

**ಕಾರ್ಯದರ್ಶಿ:–** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:– ಮಂಡಿಸಲಾಯಿತು.**

**(ಗೊಂದಲ)**

**ಸಭಾಪತಿಯವರು:–** ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಶ್ರೀ ಹೆಚ್.ಎಂ.ರೇವಣ್ಣರವರಿಂದ.

**(ಗೊಂದಲ)**

**4. <u>ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ</u>**

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2019 ನೇ ಫೆಬ್ರವರಿ, 06 ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, 2019 ನೇ ಫೆಬ್ರವರಿ, 06 ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ.ರೇವಣ್ಣ ರವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**5. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ**

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಉತ್ತಮವಾಗಿ ನಡೆಯುತ್ತಿದ್ದ ಅನೇಕ ಕಾರ್ಯಕ್ರಮಗಳನ್ನು ಘನತೆವೆತ್ತ ರಾಜ್ಯಪಾಲರ ಮುಖೇನ ಇವತ್ತಿನ ದಿವಸ ರಾಜ್ಯಕ್ಕೆ ತಿಳಿಸಲಾಗುತ್ತಿದೆ. ನಮ್ಮ ರಾಷ್ಟ್ರವು ರೈತರ ರಾಷ್ಟ್ರವಾಗಿದ್ದು, ಹಳ್ಳಿಗಳಿಂದ ಕೂಡಿದೆ. ರೈತರ ಪರವಾಗಿ ಅನೇಕ ಕಾರ್ಯಕ್ರಮಗಳನ್ನು ಕೊಡುವ ಸರ್ಕಾರಕ್ಕೆ ಮಾನ್ಯ ವಿರೋಧ ಪಕ್ಷದವರು ಕೊಡುವಂತಹ ಸಹಕಾರ ಯಾವ ರೀತಿಯದ್ದಾಗಿದೆ? ದೇಶದ ಅನೇಕ ರಾಜ್ಯಗಳಲ್ಲಿ ಇವತ್ತು ರೈತರ ಸಾಲ ಮನ್ನಾ ಮಾಡಿಲ್ಲ. ಆದರೆ, ಇವತ್ತಿನ ದಿವಸ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿಯವರು ರೈತರ ಪರವಾಗಿ ಕಾರ್ಯಕ್ರಮಗಳನ್ನು, ಕೃಷಿ, ತೋಟಗಾರಿಕೆ ಮತ್ತಿತರೆ ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ಈ ರೀತಿಯ ನಡವಳಿಕೆಗೆ ಕಾರಣವೇನು? ಏನಾದರೂ ಸಕಾರಣವಿದ್ದರೆ ಈ ರೀತಿಯಾಗಿ ಮಾಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅಸ್ತಿತ್ವದಲ್ಲಿರುವ ಸರ್ಕಾರ ತನ್ನ ಬಹುಮತವನ್ನು ಕಳೆದುಕೊಂಡಿದೆ. ಹೀಗಾಗಿ ರಾಜಿನಾಮೆ ನೀಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಒಂದು ವೇಳೆ ಸರ್ಕಾರ ತನ್ನ ಬಹುಮತವನ್ನು ಕಳೆದುಕೊಂಡಿದ್ದರೆ, ಅದಕ್ಕೆ ಬೇರೆಯಾದ ದಾರಿಗಳಿವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ರಾಜಿನಾಮೆ ಕೊಡುವುದು ಒಂದೇ ಅಲ್ಲ...

**(ಗೊಂದಲ)**

**ಸಭಾಪತಿಯವರು:–** ಬಹುಮತವನ್ನು ಕಳೆದುಕೊಂಡರೆ ಅವಿಶ್ವಾಸ ನಿರ್ಣಯ ಮಂಡಿಸುವುದಕ್ಕೆ ತನ್ನದೇ ಆದ ದಾರಿಗಳಿವೆ. ಅದನ್ನು ಮಾಡುವುದನ್ನು ಬಿಟ್ಟು, ನೀವು ಈ ರೀತಿಯಾಗಿ ಸದನದ ಕಲಾಪಗಳನ್ನು ಏಕೆ ಸ್ಥಗಿತಗೊಳಿಸುತ್ತಿದ್ದೀರಿ? ನಿಮ್ಮ ಈ ರೀತಿಯ ನಡವಳಿಕೆಯ ಉದ್ದೇಶವೇನು? ಇದಕ್ಕೆ ಸಕಾರಣವನ್ನು ಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅಸ್ತಿತ್ವದಲ್ಲಿರುವ ಸರ್ಕಾರಕ್ಕೆ ಬಹುಮತ ಇಲ್ಲ. ರಾಜಿನಾಮೆ ಕೊಡುವುದು ಒಂದೇ ಅಲ್ಲ ...

**(ಗೊಂದಲ)**

**ಸಭಾಪತಿಯವರು:–** ಈಗ ಸಭೆಯನ್ನು ಅಪರಾಹ್ನ 3:00 ಗಂಟೆಯವರೆಗೆ ಮುಂದೂಡಲಾಗಿದೆ.

(010)7–2–2019/3–10/ಎಲ್ಎಂ/ಬಿಎನ್ಎಸ್

**(ಸದನವು ಅಪರಾಹ್ನ 12 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ 3 ಗಂಟೆ 10 ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಬಾವಿಗೆ ಬಂದು “ಭೋಲೋ ಭಾರತ್ ಮಾತಾಕಿ ಜೈ” ಎಂದು ಘೋಷಣೆಗಳನ್ನು ಕೂಗುತ್ತಾ ಸರ್ಕಾರದ ವಿರುದ್ಧದ ಫಲಕಗಳನ್ನು ಪ್ರದರ್ಶಿಸಿದರು)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ವಿರೋಧ ಪಕ್ಷದ ಸದಸ್ಯರುಗಳ ವಿರುದ್ಧ ಘೋಷಣೆಗಳನ್ನು ಕೂಗಿ ಫಲಕಗಳನ್ನು ಪ್ರದರ್ಶಿಸುತ್ತಾ, “ ಜೈಲು ಸೇರಿದ ಏಕೈಕ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ ನೀವು ಮಾತನಾಡಿ. ಏಕೆ ಧರಣಿಯನ್ನು ಮಾಡುತ್ತಿದ್ದೀರಿ ಎನ್ನುವ ಕಾರಣವನ್ನು ಹೇಳಿ. ಸುಮ್ಮನೆ ಧರಣಿ ಮಾಡಿದರೆ ಏನು ಅರ್ಥ.

**ಡಾ: ಜಯಮಾಲ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ವಿರೋಧ ಪಕ್ಷದವರು ಕಾರಣ ಹೇಳದೆ ಸುಮ್ಮನೆ ಧರಣಿ ಮಾಡುತ್ತಿದ್ದಾರೆ. ಏಕೆ ಹೀಗೆ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತಿಲ್ಲ. ಕಾರಣ ಇಲ್ಲದೆ ಈ ರೀತಿ ಗೊಂದಲ ಉಂಟು ಮಾಡುವುದು ಯಾವ ನ್ಯಾಯ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಈ ಸರ್ಕಾರಕ್ಕೆ ಬಹುಮತ ಇಲ್ಲ. ಬಹುಮತ ಇಲ್ಲದ ಮೇಲೆ ಸರ್ಕಾರ ಹೇಗೆ ಆಡಳಿತವನ್ನು ನಡೆಸುತ್ತದೆ?

**(ಗೊಂದಲ)**

**ಸಭಾಪತಿಯವರು:–** ಅವಿಶ್ವಾಸ ನಿರ್ಣಯವನ್ನು ತನ್ನಿ.

**(ಗೊಂದಲ)**

**ಸಭಾಪತಿಯವರು:–** ನಿಮಗೆ ಸದನದ ಬಗ್ಗೆ ಗೌರವ ಇಲ್ಲದಿದ್ದರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಈ ಸರ್ಕಾರ ಬಹುಮತ ಕಳೆದುಕೊಂಡಿದೆ.

**ಸಭಾಪತಿಯವರು:–** ಅದಕ್ಕೆ ಏನು ಮಾಡಬೇಕು, ಏನು ದಾರಿ ಇದೆ ನೀವೇ ಹೇಳಿ. ಕಾರಣ ಇದ್ದರೆ ಧರಣಿ ಮಾಡಿ, ಕಾರಣ ಇಲ್ಲದೆ ಈ ರೀತಿ ಗೊಂದಲ ಉಂಟು ಮಾಡಿ ಸದನದ ಸಮಯವನ್ನು ಈ ರೀತಿ ಉಪಯೋಗಿಸಿಕೊಳ್ಳುವುದು ಸರಿಯಲ್ಲ.

(ಗೊಂದಲ)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**( ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ವಿರೋಧ ಪಕ್ಷದ ಸದಸ್ಯರ ವಿರುದ್ಧ ಹಾಗೂ ವಿರೋಧ ಪಕ್ಷದ ಸದಸ್ಯರು ಆಡಳಿತ ಪಕ್ಷದ ಸದಸ್ಯರ ವಿರುದ್ಧ 'ಧಿಕ್ಕಾರ'ದ ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:– ಈಗ ಸದನವನ್ನು ನಾಳೆ ಮಧ್ಯಾಹ್ನ 3.00 ಗಂಟೆವರೆಗೆ ಮುಂದೂಡಲಾಗಿದೆ.**

**(ಸದನವು ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 8ನೇ ಫೆಬ್ರವರಿ ಮಾಹೆ 2019ರ ಶುಕ್ರವಾರದಂದು ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"